C.C 1/2022
PW-1

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು. ದಿನಾಂಕಃ 17 /*07/*2025

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ವಿ ಸಿ ಡಿ ವಕೀಲರ ಪರವಾಗಿ ಶ್ರೀ ಡಿ ವಿ ಎನ್ ವಕೀಲರಿಂದಃ</u>**

ನನಗೆ ಒಬ್ಬ ಮಗ ಮತ್ತು ಮಗಳು ಇರುತ್ತಾರೆ. ನನ್ನ ಮಗ ಗುತ್ತಿಗೆ ದಾರನಾಗಿದ್ದು, ನನ್ನ ಮಗಳ ಮದುವೆ ಯಾಗಿರುತ್ತದೆ. ನನಗೆ ಬಿಪಿಎಲ್ ಪಡಿತರ ಚೀಟಿ ಇರುತ್ತದೆ. ಸದರಿ ಚೀಟಿಯನ್ನು ಕಡುಬಡವರಿಗೆ ನೀಡುತ್ತಾರೆ. ನನಗೆ 60,000/- ವಾರ್ಷಿಕ ಆದಾಯವಿರುತ್ತದೆ.

2.ಆರೋಪಿಯ ಮಗ ನಮ್ಮ ಮನೆಯಲ್ಲಿ ಕೆಲಸಕ್ಕಿದ್ದ ಕಾರಣ ನನಗೆ ಮೂರು ವರ್ಷಗಳಿಂದ ಆರೋಪಿಯ ಪರಿಚಯವಿರುತ್ತದೆ. ಆರೋಪಿಗೆ ಒಬ್ಬ ಮಗನಿದ್ದು ಹೆಣ್ಣುಮಕ್ಕಳು ಇರುವ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿಗೆ ಜಮೀನಿರುವ ವಿಷಯ ನನಗೆ ಗೊತ್ತಿಲ್ಲ. ಆರೋಪಿಗೆ ಸದರಿ ಜಮೀನಿನಿಂದ ಮಾಸಿಕ 50,000/- ರಿಂದ 60,000/- ಆದಾಯ ಇರುತ್ತದೆ ಎಂದರೆ ಸರಿ. ನಾನು ಆರೋಪಿಗೆ ನೀಡಿದ್ದ ಹಣವನ್ನು ನನ್ನ ಜೆಸಿಬಿ ಯಿಂದ ಬರುತ್ತಿದ್ದ ಆದಾಯ ಮತ್ತು ಬಾಳೆಹಣ್ಣಿನ ವ್ಯಾಪಾರದಿಂದ ಹೊಂದಿಸಿದ್ದೆ. ನನ್ನ ವ್ಯಾಪಾರದ ಬಗ್ಗೆ ನಾನು ಯಾವುದೇ ಪರವಾನಗಿಯನ್ನು ನ್ಯಾಯಾಲಯಕ್ಕೆ ಹಾಜರಿಸಿಲ್ಲ. ಜಿ ಸಿ ಬಿ ಸಂಬಂಧಿತ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರಿಸಿಲ್ಲ.

3. ವಿವಾದಿತ ಸಾಲದ ವ್ಯವಹಾರವು ನಮ್ಮ ಮನೆಯಲ್ಲಿ ನನ್ನ, ನನ್ನ ಯಾಜಮಾನರು ಆರೋಪಿ ಮತ್ತು ಆರೋಪಿಯು ಮಗನ ಮದ್ಯೆ ನಡೆದಿತ್ತು. ಸಾಮಾನ್ಯವಾಗಿ 10,000/- ಮೇಲ್ಪಟ್ಟ ವ್ಯವಹಾರವನ್ನು ಬ್ಯಾಂಕಿನ ಮುಖಾಂತರ ಮಾಡಬೇಕೆಂಬ ನಿಯಮ ಇರುವುದು ನನಗೆ ಗೊತ್ತು. ಸಾಕ್ಷಿಯು ಮುಂದುವರೆದು ನಿಯಮ ಇರುವುದು ಗೊತ್ತಿಲ್ಲ ಎನ್ನುತ್ತಾರೆ. ನಾನು ಆರೋಪಿಗೆ ವಿವಾದಿತ ಸಾಲವನ್ನು ನಗದು ರೂಪದಲ್ಲಿ ನೀಡಿರುತ್ತೇನೆ. ಸಾಕ್ಷಿಯು ಮುಂದುವರೆದು ನಾನು ಬ್ಯಾಂಕಿನ ಮುಖಾಂತರ ನೀಡಿದ್ದೆ ಎನ್ನುತ್ತಾರೆ. ನಾನು ಯಾವುದೇ ಬಡ್ಡಿ ವ್ಯವಹಾರ ಮಾಡುವುದಿಲ್ಲ. ಆರೋಪಿಯು ನಿ ಪಿ 1 ರಲ್ಲಿ ಕನ್ನಡದಲ್ಲಿ ಸಹಿ ಮಾಡಿರುತ್ತಾರೆ.

**(ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ**

**ಸಿವಿಲ್ ಜಡ್ಜ್ ಮತ್ತು ಜೆ ಎಮ್ ಎಫ್ ಸಿ,**

C.C 1/2022
PW-1

ಹೊಳೆನರಸೀಪುರ